ವಿಜಯ ಕರ್ನಾಟಕ

Sunday, January 8, 2012

# ವೇಗಸ್ ವೈ ಕ್ರೀಡಾಕೂಟ

**ಬೆಂಗಳೂರು:** ಜೈನ್ ವಿಶ್ವವಿದ್ಯಾಲಯ ಆಶ್ರಯದಲ್ಲಿ ಜನವರಿ 8ರಿಂದ 11ರ ವರೆಗೆ ಮೂರು ದಿನಗಳ ಕಾಲ 'ವೇಗಸ್ ವೈ-2012' ಅಖಿಲ ಭಾರತ ಕ್ರೀಡೋತ್ಸವ ನಡೆಯಲಿದೆ.

ದೇಶದ ವಿವಿಧೆಡೆ ಇರುವ ಅಗ್ರ ವಿವಿಗಳಲ್ಲದೇ, ಶ್ರೀಲಂಕಾದ ಜೆಆರ್‌ಡಿ ಕಾಲೇಜು ಮತ್ತು ಗಾಂಘಾ ಜಿಲ್ಲೆಗಳಿಂದಲೂ ಅಥ್ಲೀಟ್‌ಗಳು ಪಾಲ್ಗೊಳ್ಳಲಿದ್ದಾರೆ.

ರಾಜ್ಯದ 1200 ಹಾಗೂ ಹೊರಸ್ಥಳದ 800 ಕ್ರೀಡಾಪಟುಗಳು ಒಟ್ಟು 12 ಕ್ರೀಡಾಕೂಟದಲ್ಲಿ ಭಾಗವಹಿಸಲಿದ್ದು, ನಗರದ ವಿವಿಧ ಕ್ರೀಡಾಂಗಣಗಳಲ್ಲಿ ಸ್ಪರ್ಧೆಗಳು ಜರುಗಲಿವೆ. ಕ್ರಿಕೆಟ್, ಬಾಸ್ಕೆಟ್‌ಬಾಲ್, ಹಾಕಿ, ಬ್ಯಾಡ್ಮಿಂಟನ್, ಟೆನಿಸ್, ಈಜು, ಫುಟ್ಬಾಲ್, ವಾಲಿಬಾಲ್, ಅಥ್ಲೆಟಿಕ್ಸ್, ಸಾಫ್ಟ್‌ಬಾಲ್ ಪ್ರಮುಖ ಸ್ಪರ್ಧೆಗಳು ನಡೆಯಲಿವೆ ಎಂದು ಜೈನ್ ವಿವಿಯ ದೈಹಿಕ ಶಿಕ್ಷಣ ನಿರ್ದೇಶಕ ಯು.ವಿ. ಶಂಕರ್ ಶುಕ್ರವಾರ ಸುದ್ದಿಗಾರರಿಗೆ ವಿವರಿಸಿದರು.

ಕ್ರೀಡಾಪಟುಗಳಿಗೆ ಉಚಿತ ವಸತಿ ವ್ಯವಸ್ಥೆ ಸೇರಿದಂತೆ ಇತರೆ ಎಲ್ಲ ಸೌಲಭ್ಯಗಳನ್ನು ನೀಡಲಾಗುತ್ತಿದ್ದು, ರಾಷ್ಟ್ರ ಅಂತಾರಾಷ್ಟ್ರೀಯ ಮಟ್ಟಗಳಲ್ಲಿ ಗಮನ ಸೆಳೆದಿರುವಂತಹ ಸ್ಪರ್ಧಿಗಳು ಪಾಲ್ಗೊಳ್ಳುತ್ತಿರುವುದು ಟೂರ್ನಿಗೆ ಮೆರಗು ತಂದಿದೆ ಎಂದು ಶಂಕರ್ ತಿಳಿಸಿದರು.